ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ:02:ಇತರೆ:2012-13:ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:02.12.2016.

# ಸುತ್ತೋಲೆ

ವಿಷಯ: 2016-17ನೇ ಸಾಲಿನ ಬೋಧನಾ ಕಾರ್ಯಭಾರ ಹಾಗೂ ಬೋಧಕ/ಬೋಧಕೇತರ ಸಿಬ್ಬಂದಿಗಳ ಸೇವಾ ವಿವರಗಳನ್ನು EMIS ನಲ್ಲಿ ಅಪ್‌ಲೋಡ್ ಮಾಡುವ ಬಗ್ಗೆ.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ:27-10-2016ರಲ್ಲಿ 2016-17ನೇ ಸಾಲಿನ ಬೋಧನಾ ಕಾರ್ಯಭಾರ ಹಾಗೂ ಸಿಬ್ಬಂದಿಗಳ ಸೇವಾ ವಿವರಗಳನ್ನು EMISನಲ್ಲಿ ದಿನಾಂಕ:03-11-2016ರೊಳಗೆ ಅಪ್‌ಲೋಡ್ ಮಾಡುವಂತೆ ಸೂಚಿಸಲಾಗಿದ್ದರೂ ಸಹ ಹಲವಾರು ಕಾಲೇಜುಗಳಿಂದ ಮಾಹಿತಿಗಳನ್ನು ಅಪ್‌ಲೋಡ್ ಮಾಡದಿರುವುದು ಹಾಗೂ ಅಪೂರ್ಣ ಮಾಹಿತಿಗಳನ್ನು ಅಪ್‌ಲೋಡ್ ಮಾಡಿರುವುದು ಕಂಡುಬಂದಿರುತ್ತದೆ. ಆದ್ದರಿಂದ ತಮ್ಮ ಕಾಲೇಜಿನ ಲೀನ್ ಹೊಂದಿರುವ (ವೇತನ ಪಡೆಯುತ್ತಿರುವ) ಕಾಲೇಜಿನ ಎಲ್ಲಾ ಸಿಬ್ಬಂದಿಗಳ ವಿವರವನ್ನು ಹಾಗು ಕಾಲೇಜಿನಲ್ಲಿ ಬೋಧಿಸುತ್ತಿರುವ ಎಲ್ಲಾ ವಿಷಯಗಳ 2016-17ನೇ ಸಾಲಿನ ಕಾರ್ಯಭಾರ ವಿವರಗಳ ವಿಷಯವಾರು ಮಾಹಿತಿಯನ್ನು ನಿಖರವಾಗಿ **ದಿನಾಂಕ:05-12-2016ರ** ಒಳಗೆ EMISನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಈಗಾಗಲೇ ಮಾಡಲಾಗಿರುವ ಮಾಹಿತಿಗಳು ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವಂತೆ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರು, ಪ್ರಾಂಶುಪಾಲರು ಹಾಗೂ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಅಂತಿಮವಾಗಿ ಸೂಚಿಸಲಾಗಿದೆ.

**ಸೂಚನೆ:**

1. ಕಾಲೇಜಿನ ಎಲ್ಲಾ ವಿಷಯಗಳ ಕಾರ್ಯಭಾರ ವಿವರಗಳು EMISನಲ್ಲಿ ಸರಿಯಾಗಿ ಅಪ್‌ಲೋಡ್ ಆಗಿರುವ ಬಗ್ಗೆ ಸಂಬಂಧಪಟ್ಟ ವಿಷಯದ ವಿಭಾಗ ಮುಖ್ಯಸ್ಥರಿಂದ ಪ್ರಾಂಶುಪಾಲರು ದೃಢೀಕರಿಸಿಕೊಳ್ಳತಕ್ಕದ್ದು.
2. ಕಾಲೇಜಿನ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ತಮ್ಮ ಸೇವಾ ವಿವರಗಳು ಸರಿಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಪ್ರಾಂಶುಪಾಲರ ಗಮನಕ್ಕೆ ತಂದು ಸರಿಪಡಿಸಲು ಕ್ರಮಕೈಗೊಳ್ಳುವುದು.
3. **ದಿನಾಂಕ:05-12-2016**ರ ನಂತರ ಮೇಲ್ಕಂಡ ಮಾಹಿತಿಗಳನ್ನು EMISನಲ್ಲಿ ಅಪ್‌ಲೋಡ್ ಮಾಡದೇ ಇರುವುದು ಹಾಗೂ ತಪ್ಪಾದ ಮಾಹಿತಿಗಳನ್ನು ಅಪ್‌ಲೋಡ್ ಮಾಡಿರುವುದು ಕಂಡು ಬಂದಲ್ಲಿ ಸಂಬಂಧಪಟ್ಟ ಪ್ರಾಂಶುಪಾಲರು ಹಾಗೂ ಸಿಬ್ಬಂದಿಗಳ ವಿರುದ್ಧ ಸೂಕ್ತ ಶಿಸ್ತು ಕ್ರಮಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

Sulpall

**ಕಾಲೇಜು ಶಿಕ್ಷಣ ಮುಖ್ಯಆಡಳಿತಾಧಿಕಾರಿಗಳು**

**ಇವರಿಗೆ:**

1. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ – ಮಾಹಿತಿ ಹಾಗೂ ತುರ್ತು ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು– ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

DCE 50 Kachori Tippani